





ಯುಗಾದಿಯ ಅದ್ದೂರಿ ಸಂಭ್ರಮವಿನ್ನೂ ತುಸು ದೂರವಿದೆ. ಈ ಎರಡರ ನಡುವೆ ತಣ್ಣಗೆ ತನ್ನಷ್ಟಕ್ಕೆ ಬಂದು ಹೋಗುವ ಹಬ್ಬ ಮಕರ ಸಂಕ್ರಮಣ. ಇದಕ್ಕೆ ದೀಪಾವಳಿಯ ಗಡಚಿಕ್ಕುವ ಗದ್ದಲವಿಲ್ಲ. ಶಿವರಾತ್ರಿಯ ಉಪವಾಸದ ತಾಪತ್ರಯಗಳಿಲ್ಲ. ಪ್ರಕೃತಿಯೊಳಗಿನ ಬದಲಾವಣೆಯನ್ನು ಸೂಚಿಸುವ, ನಮ್ಮೊಳಗೆ ಆಗಬೇಕಾಗಿರುವ ಬದಲಾವಣೆಯನ್ನೂ ಸಂಕೇತಿಸುವ ಸೀದಾ ಸಾದಾ ಹಬ್ಬವಿದು.

ತನ್ನ ಹೆಸರಿನಲ್ಲಿಯೇ 'ಸ'ಕಾರಾತ್ಮಕತೆಯನ್ನೂ 'ಕ್ರಾಂತಿ'ಯನ್ನೂ ಇಟ್ಟುಕೊಂಡಿರುವ ವಿಶಿಷ್ಟ ಹಬ್ಬವಿದು. 'ಸಂಕ್ರಮಣ' ಎಂಬುದಕ್ಕೆ ಒಟ್ಟಿಗೆ ಸೇರುವುದು, ಒಟ್ಟಿಗೇ ಹೋಗುವುದು, ಕೂಡುವುದು ಎಂಬ ಅರ್ಥಗಳೂ ಇವೆ. ಹೀಗೆ 'ಒಟ್ಟುಗೂಡುವಿಕೆ'ಯ ಅಗತ್ಯ ಇಂದು ಎಷ್ಟಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲವಷ್ಟೆ!

ಸಂಕಷ್ಟ, ಸಂಕಟ, ಸಂತಾಪಗಳೇ ಮೇಳೈಸುತ್ತಿರುವ ನಮ್ಮ ಪ್ರಚಲಿತ ಬದುಕಿಗೆ ಸಮೃದ್ಧಿ, ಸಂತೋಷ, ಸಂಪತ್ತು ಹೀಗೆ ಸಕಾರಾತ್ಮಕತೆಯ ಆಶಯಗಳನ್ನೆಲ್ಲ ಹೊತ್ತು ತರುತ್ತಿದ್ದಾನೆ ಮಕರ ಸಂಕ್ರಮಣದ ರವಿ. ಬದಲಾವಣೆಯ ಗಳಿಗೆಯನ್ನು 'ಪುಣ್ಯಕಾಲ' ಎಂದು ಕರೆದು ಹಬ್ಬವಾಗಿಸಿದ ನಮ್ಮ ಹಿರಿಯರ ಕಾಣ್ಕೆಯನ್ನು ಮತ್ತೊಮ್ಮೆ ಎದೆಗಿಳಿಸಿಕೊಳ್ಳುವ ಹಾಗೆ ನಮ್ಮನ್ನು ಒತ್ತಾಯಿಸುತ್ತಿದೆ ಈ ಸಂಕ್ರಾಂತಿ. ಹಾಗೆ ನೋಡಿದರೆ ನಮ್ಮ ಸಮಾಜವೂ ಈಗ ದಿಕ್ಕು ಬದಲಿಸಿಕೊಳ್ಳಲೇಬೇಕಾದ ಸಂಕ್ರಮಣದ ಕಾಲದಲ್ಲಿ ಇದೆಯಲ್ಲವೇ?

ಹಣದ ವ್ಯಾಮೋಹವೆಂಬುದು ಮಾರಣಾಂತಿಕ ಕಾಯಿಲೆಯ ಹಾಗೆ ಸಮಾಜದ ಕಣಕಣವನ್ನೂ ಕಬಳಿಸುತ್ತಿರುವ ಹೊತ್ತಿದು. ಭ್ರಷ್ಟತೆ, ಡಾಂಭಿಕತೆಗಳು ಹೊಸ ಹೊಸ ಆಧುನಿಕ ವೇಷ ತೊಟ್ಟು ನಮ್ಮೆಲ್ಲರ ಕತ್ತಿಗೆ ಹಗ್ಗ ಕಟ್ಟಿ ಕುಣಿಸುತ್ತಿರುವ ಕಾಲವಿದು. ಜೀವನಕ್ಕೆ ದರ್ಶನದ ಬೆಳಕನ್ನು ಹರಿಸಬೇಕಾಗಿದ್ದ ಧರ್ಮಗಳೇ ದಳ್ಳುರಿಗಳಾಗಿ ಭಗಭಗ ಉರಿಯುತ್ತಿರುವ ದುರಿತ ದಿನಮಾನವಿದು. ಆಡಳಿತವೆಂಬುದು ದುರುಳರ ಕೂಟವಾಗಿ, ವ್ಯಾಪಾರವೆಂಬುದು ದುರಾಚಾರದ ಸಂತೆಯಾಗಿ, ಜೀವಂತ ಮನುಷ್ಯರು ದಾಳಗಳಾಗಿ, 'ಯೂನಿಟ್'ಗಳಾಗಿ ಬದಲಾಗಿರುವ ಈ ಹೊತ್ತಿನಲ್ಲಿ, ಬದಲಾವಣೆಯ ಸಂಕೇತವನ್ನು ಹೊತ್ತು ತರುತ್ತಿರುವ ಮಕರ ಸಂಕ್ರಮಣದಿಂದ ನಾವು ಅರಿಯಬೇಕಾದುದು, ಅಳವಡಿಸಬೇಕಾದುದು ಬಹಳಷ್ಟಿದೆ.

ಹೊಲದಲ್ಲಿ ಬೆಳೆಗಳಿಗಿಂತ ಕಳೆಗಳೇ ಹೆಚ್ಚಾದರೆ ರೈತನ ಗತಿಯೇನು? ಹಾಗೆ ಮನದಲ್ಲಿಯೂ ಮಾನವೀಯತೆಯ ಮೇಳಗಿಂತ ದ್ವೇಷದ ಕೊಳೆಗಳೇ ಹೆಚ್ಚಾಗಿ ತುಂಬಿಕೊಂಡರೆ ಮನುಷ್ಯಸಮಾಜದ ಗತಿಯೇನು? ತನ್ನೊಳಗಿನ ದುಷ್ಟತನದ ಸರ್ವನಾಶಕವನ್ನು ಪ್ರಕೃತಿಯ ಮೇಲೂ ಹರಿಹಾಯಿಸಿ, ಎಲ್ಲವನ್ನೂ ಹಾಳುಗಡೆಯುತ್ತ, ಮತ್ತಿನಲ್ಲಿ ಮೈಮರೆಯುತ್ತಿರುವ ಮನುಷ್ಯ, ಕಾಲೆದುರಿಗಿರುವ ಕಂದಕಕ್ಕೆ ಕುರುಡಾಗಿದ್ದಾನೆ. ಈಗಲೇ ಅವನು ತನ್ನ 'ಪಥ'ವನ್ನು ಬದಲಿಸಿಕೊಳ್ಳದೇ ಹೋದರೆ ತನ್ನ ವಿನಾಶಕ್ಕೆ ತಾನೇ ಕಾರಣನಾಗಿಬಿಡುತ್ತಾನೆ.

ಕವಿ ಸು.ರಂ. ಎಕ್ಕುಂಡಿ ಅವರ 'ಕೊರಗು' ಪದ್ಯದ ಸಾಲುಗಳು ಹೀಗಿವೆ:

'ಹತ್ತು ದಿಕ್ಕಿಗೆ ಹರಿಯುವ ಗಾಳಿಯ ಕರೆದವರೇ ಇಲ್ಲ
ನಮಗೂ ನಿಮಗೂ ಹೃದಯದ ಬಾಗಿಲು ತೆರೆದವರೇ ಇಲ್ಲ'

ಸಂಕ್ರಾಂತಿಯ ಗಳಿಗೆಯಲ್ಲಿ ಬದಲಾಗಬೇಕಾಗಿರುವುದು ಬಹಿರಂಗದ ನಡೆಯ ಪಥವಷ್ಟೇ ಅಲ್ಲ; ಅಂತರಂಗದ ಕ್ರಮಣವೂ ಹೌದು. ಎಳ್ಳು ಬೆಲ್ಲದ ಸಿಹಿ ನಮ್ಮ ನಾಲಿಗೆಯನ್ನಷ್ಟೇ ಅಲ್ಲ, ಅಭಿರುಚಿಗಳ ಜಿಹ್ವೆಯನ್ನೂ ಸಾಪುಗೊಳಿಸಲಿ. ದೀರ್ಘಗೊಳ್ಳುವ ಹಗಲು ನಮ್ಮೊಳಗಿನ ಅಂಧತ್ವವನ್ನು ಕಮ್ಮಿಗೊಳಿಸಲಿ. ನೆಲದ ಎದೆಯ ಮೇಲೆ ಧ್ವಜದ ಹಾಗೆ ನಿಂತು ತುಯ್ದಾಡುತ್ತಿರುವ ಬೆಳೆಯ ತೆನೆಗಳು, ನಮ್ಮೊಳಗಿನ ದುರಾಸೆಯ ರಕ್ಕಸನನ್ನು ಸುಮ್ಮನಾಗಿಸಲಿ. ಸಹಜೀವಿಗಳನ್ನು ಸಹನೆಯಿಂದ ಕಾಣುವ, ಸಂಕಷ್ಟಗಳನ್ನು ಒಟ್ಟಾಗಿ ಎದುರಿಸುವ ವಿವೇಕ ನಮ್ಮದಾಗಲಿ. ನಮ್ಮ ಎದೆಯ ಕಿಟಕಿಗಳನ್ನು ತೆರೆದುಕೊಂಡು, 'ಹತ್ತು ದಿಕ್ಕಿಗೆ ಹರಿಯುವ ಗಾಳಿಯ' ಕರೆಯುವ ವೈಶಾಲ್ಯವನ್ನೂ, 'ನಮಗೂ ನಿಮಗೂ ಹೃದಯದ ಬಾಗಿಲು ತೆರೆಯುವ' ವಿವೇಕವನ್ನೂ ಈ ಮಕರ ಸಂಕ್ರಮಣ ಕರುಣಿಸಲಿ.

ಮಕರ ಸಂಕ್ರಮಣದ ಶುಭಾಶಯಗಳು.

ಪ್ರತಿಕ್ರಿಯಿಸಿ: feedback@sudha.co.in